

# ಪ್ರಿಯಾಮಣಿ ಹ್ಯಾಟ್ರಿಕ್?

ಕನ್ನಡದ ಪ್ರತಿಭಾವಂತ ನಟಿಯರಲ್ಲಿ ಒಬ್ಬರಾದ ಪ್ರಿಯಾಮಣಿ ಅಭಿನಯದ 'ದನ ಕಾಯೋನು' ಚಿತ್ರ ದಸರೆ ಸಂದರ್ಭದಲ್ಲಿ (ಅ. 7) ತೆರೆ ಕಾಣುತ್ತಿದೆ. ದುನಿಯಾ ವಿಜಯ್ ನಾಯಕರಾಗಿ ಅಭಿನಯಿಸಿರುವ ಈ ಸಿನಿಮಾ ಸಾಕಷ್ಟು ವಿಳಂಬವಾಗಿ ತೆರೆ ಕಾಣುತ್ತಿದ್ದರೂ, ಯೋಗರಾಜ ಭಟ್ ನಿರ್ದೇಶನದ ಕಾರಣದಿಂದಾಗಿ ಚಿತ್ರರಸಿಕರ ಗಮನಸೆಳೆದಿದೆ.

ಪ್ರಿಯಾಮಣಿ ಅವರ ಪಾಲಿಗೆ 'ದನ ಕಾಯೋನು' ವಿಶೇಷ ಸಿನಿಮಾ. ತಾವು ಈವರೆಗೆ ಕನ್ನಡದಲ್ಲಿ ಅಭಿನಯಿಸಿರದ ವಿಶಿಷ್ಟ ಬಗೆಯ ಪಾತ್ರವೊಂದನ್ನು ಅವರು ಈ ಚಿತ್ರದಲ್ಲಿ ಪೋಷಿಸಿದ್ದಾರಂತೆ. ಜುಮ್ಮಿ (ಜಮುನಾ) ಎನ್ನುವ ಕೊಂಚ ಗಯ್ಯಾಳಿ ರೀತಿಯ ಹಳ್ಳಿಹುಡುಗಿಯ ಪಾತ್ರವನ್ನು ಅವರು ಪೋಷಿಸಿದ್ದಾರೆ. ನಾಯಕ–ನಾಯಕಿ ನಡುವೆ ಸಿಕ್ಕಾಪಟ್ಟೆ ಜಗಳವೂ ತಮಾಷೆಯೂ ಇರುವ ಈ ಸಿನಿಮಾ ನೋಡುಗರಿಗೆ ಕಚಗುಳಿ ಇಡುತ್ತದಂತೆ. ಚಿತ್ರದ ತಾರಾಗಣದಲ್ಲಿ ಕಲಾವಿದರ ಜೊತೆಗೆ ದನಕರುಗಳೂ ಸ್ಥಾನಪಡೆದಿವೆ. 'ಮನುಷ್ಯರಿಗಿಂತಲೂ ಹೆಚ್ಚಿನ ಮಾನವೀಯತೆ ಪಶುಗಳಲ್ಲಿದೆ' ಎನ್ನುವ ನೀತಿಪಾಠ ಚಿತ್ರದ ಕಥೆಯಲ್ಲಿದೆ ಎಂದು ಯೋಗರಾಜ ಭಟ್ ಹೇಳಿದ್ದಾರೆ.

ಪ್ರಿಯಾಮಣಿ ಅವರ ಪಾಲಿಗೆ ಅಕ್ಟೋಬರ್ ತಿಂಗಳಿಡೀ ಸಂಭ್ರಮದ ಸಮಯ. 'ದನ ಕಾಯೋನು' ಜೊತೆಗೆ ಅವರ ಅಭಿನಯದ ಮತ್ತೊಂದು ಚಿತ್ರ 'ಇದೊಳ್ಳೆ ರಾಮಾಯಣ' ಕೂಡ ದಸರೆ ಸಂದರ್ಭದಲ್ಲೇ ತೆರೆ ಕಾಣುತ್ತಿದೆ. ಅಕ್ಟೋಬರ್ ಕೊನೆಯಲ್ಲಿ ದ್ವಾರಕೀಶ್ ಸಂಸ್ಥೆಯ 'ಚೌಕ' ತೆರೆಕಾಣಲು ಸಿದ್ಧತೆ ನಡೆಸುತ್ತದೆ. 'ಚೌಕ' ಬಹು ತಾರಾಗಣದಿಂದಾಗಿ ಗಮನಸೆಳೆದಿರುವ ಚಿತ್ರ. ಪ್ರಿಯಾಮಣಿ ಅವರೊಂದಿಗೆ ಭಾವನಾ ಮೆನನ್, ವಿಜಯ ರಾಘವೇಂದ್ರ, ದಿಗಂತ್, ಪ್ರಜ್ವಲ್ ದೇವರಾಜ್, ಪ್ರೇಮ್, ದೀಪಾ ಸನ್ನಿಧಿ ಹಾಗೂ ಐಂದ್ರಿತಾ ರೇ 'ಚೌಕ'ದ ತಾರಾಗಣದಲ್ಲಿರುವ ಪ್ರಮುಖರು. ದ್ವಾರಕೀಶ್ ಸಂಸ್ಥೆಯ 50ನೇ ಸಿನಿಮಾ ಎನ್ನುವ ಅಗ್ಗಳಿಕೆಯ 'ಚೌಕ' ಅಕ್ಟೋಬರ್‌ನಲ್ಲೇ ತೆರೆ ಕಂಡರೆ – ಒಂದೇ ತಿಂಗಳಲ್ಲಿ ಪ್ರಿಯಾಮಣಿ ಅಭಿನಯದ ಮೂರು ಚಿತ್ರಗಳು ತೆರೆ ಕಂಡಂತಾಗುತ್ತದೆ.



# ಹಂಸೆಯಾದ ಗೌರಮ್ಮ!

ಕಿರುತೆರೆಯ 'ಪುಟ್ಟಗೌರಿ' ಧಾರಾವಾಹಿ ಖ್ಯಾತಿಯ ರಂಜನಿ ರಾಘವನ್ ಈಗ ನಾಯಕಿಯಾಗಿ ಚಿತ್ರರಂಗಕ್ಕೆ ಪರಿಚಯಗೊಳ್ಳುತ್ತಿದ್ದಾರೆ. 'ರಾಜಹಂಸ' ಅವರು ಅಭಿನಯಿಸುತ್ತಿರುವ ಚಿತ್ರದ ಹೆಸರು.

ಸಾಂಪ್ರದಾಯಿಕ ಕುಟುಂಬದ ರಂಜನಿ ಮೂರನೇ ವರ್ಷದ ಹುಡುಗಿಯಾಗಿದ್ದಾಗಿನಿಂದಲೇ ನಟನೆಯ ಗೀಳಿಗೆ ಒಳಗಾಗಿದ್ದರಂತೆ. ರಂಗಭೂಮಿಯಲ್ಲಿ ಪಳಗಿರುವ ಅವರು 'ಆಕಾಶದೀಪ' ಹಾಗೂ 'ಪುಟ್ಟಗೌರಿ' ಧಾರಾವಾಹಿಗಳ ಮೂಲಕ ಕಿರುತೆರೆ ಪ್ರೇಕ್ಷಕರಿಗೆ ಪರಿಚಿತರು. ಈಗ ಜಡೇಶ್‌ಕುಮಾರ್ ನಿರ್ದೇಶನದ 'ರಾಜಹಂಸ' ಚಿತ್ರದಲ್ಲಿ ನಟಿಸುತ್ತಿದ್ದಾರೆ. ಜಡೇಶ್ ಹೇಳಿದ ಕಥೆ ಸಿಕ್ಕಾಪಟ್ಟೆ ಇಷ್ಟವಾದ ಕಾರಣ ಅವರು ಸಿನಿಮಾ ಒಪ್ಪಿಕೊಂಡಿದ್ದಾರಂತೆ. 'ಸಿನಿಮಾದ ಶೇ 85 ದೃಶ್ಯಗಳಲ್ಲಿ ನನ್ನ ಪಾತ್ರ ತೆರೆಯ ಮೇಲೆ ಬರಲಿದೆ. ನಾಯಕಿ ಪಾತ್ರಕ್ಕೆ ಸಾಕಷ್ಟು ಅವಕಾಶ ಇದ್ದುದರಿಂದಲೇ ಸಿನಿಮಾ ಒಪ್ಪಿಕೊಂಡೆ' ಎನ್ನುತ್ತಾರೆ ರಂಜನಿ.

ಗ್ರಾಮೀಣ ಮತ್ತು ನಗರ ಪ್ರದೇಶಗಳ ಸಂಸ್ಕೃತಿ ನಡುವಣ ಸಂಘರ್ಷದ ಕಥೆ 'ರಾಜಹಂಸ' ಚಿತ್ರದಲ್ಲಿ ಇದೆಯಂತೆ. ರಂಜನಿಗೆ ನಾಯಕಿಯಾಗಿ ಗೌರಿಶಿಖರ್ ನಟಿಸುತ್ತಿದ್ದು, ನಿರ್ದೇಶಕರು ಹೇಳಿದ ರೊಮ್ಯಾಂಟಿಕ್ ಥ್ರಿಲ್ಲರ್ ಕಥೆ ಅವರಿಗಿಷ್ಟವಾಗಿದೆ. ಹಿರಿಯ ನಟ ಶ್ರೀಧರ್ ಹಾಗೂ 'ಚಿನ್ನ' ಸಿನಿಮಾದಲ್ಲಿ ರವಿಚಂದ್ರನ್‌ಗೆ ನಾಯಕಿಯಾಗಿ ನಟಿಸಿದ್ದ ಯಮುನಾ ತಾರಾಗಣದಲ್ಲಿರುವ ಪ್ರಮುಖರು.

■ ರಘು